## ಕರ್ನಾಟಕ ಸರ್ಕಾರ

ಸಂ:ಸಕನಿ/ಸಿಬ್ಬಂದಿ-03/ಸಿಆರ್-40/2023-24

ಸಮಾಜ ಕಲ್ಯಾಣ ಆಯುಕ್ತರ ಕಛೇರಿ.
5ನೇ ಮಹಡಿ, ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 02/02/2024.

### ಅಧಿಕೃತ ಜ್ಞಾಪನ

**ವಿಷಯ :** ಸಮಾಜ ಕಲ್ಯಾಣ ಇಲಾಖೆಯ ಗ್ರೂಪ್-ಸಿ ವೃಂದದ ಪ್ರಥಮ ದರ್ಜೆ ಸಹಾಯಕರ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ದಿ:31-12-2023 ಕ್ಕೆ ಅಂತ್ಯಗೊಂಡಂತೆ ದಿ:01-01-2024 ರಲ್ಲಿದ್ದಂತೆ

ಉಲ್ಲೇಖ:
1. ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತಾ) ನಿಯಮಗಳು, 1957
2. ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಡಿಪಿಎಆರ್ 48 ಎಸ್ಎಸ್ಆರ್ 75 ದಿ:05-07-1976
3. ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 43 ಸೇನೆನಿ 87 ದಿ:14-12-1987
4. ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 07 ಸೇನೆನಿ 96 ದಿ:16-07-1996
5. ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 32 ಸೇನೆನಿ 2003 ದಿ:10-06-2003
6. ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 3 ಎಸ್ಆರ್ಎಸ್ 2019 ದಿ:04-06-2019
7. ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 106 ಸೇನೆನಿ 2021 ದಿ:10-12-2021

*******

ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತಾ) ನಿಯಮಗಳು, 1957 ರ ನಿಯಮ 10 ರಡಿ ಜೇಷ್ಠತಾ ನಿಯಮಗಳನ್ನು ಅನುಸರಿಸಿ ಪ್ರತಿಯೊಂದು ವೃಂದದ ಜೇಷ್ಠತಾ ಪಟ್ಟಿಯನ್ನು ಪ್ರತಿ ವರ್ಷ ನೇಮಕಾತಿ ಪ್ರಾಧಿಕಾರವು ಸಿದ್ಧಪಡಿಸಬೇಕಾಗಿರುತ್ತದೆ.

ರಾಜ್ಯ ಸಿವಿಲ್ ಸೇವೆಯಲ್ಲಿನ ಹುದ್ದೆಗಳಿಗೆ ಸಂಬಂಧಿಸಿದಂತೆ, ಇಲಾಖಾ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ನೇರ ನೇಮಕಾತಿ ಮತ್ತು ಮುಂಬಡ್ತಿ ಎರಡು ಮೂಲಗಳಿಂದ ಭರ್ತಿ ಮಾಡಲು ಅನುಪಾತ (Quota) ನಿಗದಿಪಡಿಸಿರುವಲ್ಲಿ, ನಿಗದಿತ ಅನುಪಾತದ ಪ್ರಕಾರ ನೇರ ನೇಮಕಾತಿ ಮತ್ತು ಮುಂಬಡ್ತಿ ಪಾಲಿನ ಹುದ್ದೆಗಳನ್ನು ಭರ್ತಿ ಮಾಡಲು ರಿಕ್ತ ಸ್ಥಾನ ಆಧಾರಿತವಾಗಿ ವರ್ಗೀಕರಣ ಮಾಡುವ ಕುರಿತು ಉಲ್ಲೇಖ (2) ಮತ್ತು (3) ರ ಸರ್ಕಾರದ ಅಧಿಕೃತ ಜ್ಞಾಪನದಲ್ಲಿ ಮಾರ್ಗಸೂಚಿಗಳನ್ನು ನೀಡಲಾಗಿರುತ್ತದೆ.

ಸದರಿ ಮಾರ್ಗಸೂಚಿಗಳಿಗೆ ಅನುಗುಣವಾಗಿ ಉಲ್ಲೇಖ (1) ರ ಸರ್ಕಾರಿ ನೌಕರರ ಜೇಷ್ಠತೆ ನಿಯಮಗಳನ್ವಯ ಜೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸಲು ಉಲ್ಲೇಖ (4) ರಿಂದ (6) ವರೆಗಿನ ಸರ್ಕಾರದ ಅಧಿಕೃತ ಜ್ಞಾಪನದಲ್ಲಿ ನಮೂನೆಯನ್ನು ನಿಗದಿಪಡಿಸಲಾಗಿದೆ.

ಉಲ್ಲೇಖ(7) ರ ಅಧಿಕೃತ ಜ್ಞಾಪನದಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ನಿಗದಿಪಡಿಸಿರುವ ಅನುಪಾತದನ್ವಯ (Quota) ನೇರ ನೇಮಕಾತಿ ಮತ್ತು ಮುಂಬಡ್ತಿಗಾಗಿ ರಿಕ್ತ ಸ್ಥಾನ ಆಧಾರಿತ ವರ್ಗೀಕರಣ ಮಾಡುವ ಪದ್ಧತಿಯನ್ನು ರದ್ದುಪಡಿಸಿ, ಹುದ್ದೆ ಆಧಾರಿತ ವರ್ಗೀಕರಣ ಅನುಸರಿಸಿ ಭವಿಷ್ಯವರ್ತಿಯಾಗಿ ಭರ್ತಿ ಮಾಡಲು ಹಿಂದಿನ ಮಾರ್ಗಸೂಚಿಯನ್ನು ಮಾರ್ಪಡಿಸಿ, ಪರಿಷ್ಕೃತ ಮಾರ್ಗಸೂಚಿಗಳನ್ನು ನೀಡಲಾಗಿರುತ್ತದೆ ಹಾಗೂ ಜೇಷ್ಠತಾ ಪಟ್ಟಿ ಸಿದ್ಧಪಡಿಸಲು ಈ ಹಿಂದಿನ ಉಲ್ಲೇಖ (4) ರಿಂದ (6) ರವರೆಗಿನ ಅಧಿಕೃತ ಜ್ಞಾಪನದಲ್ಲಿ ನಿಗದಿಪಡಿಸಲಾದ ನಮೂನೆಗಳನ್ನು ಮಾರ್ಪಡಿಸಿದೆ.

ಉಲ್ಲೇಖ (7) ರ ಸರ್ಕಾರದ ಅಧಿಕೃತ ಜ್ಞಾಪನ ಅನುಬಂಧ-1 ರಲ್ಲಿ ನೇರ ನೇಮಕಾತಿ ಮತ್ತು ಮುಂಬಡ್ತಿ ಎರಡು ವಿಧಾನಗಳಿಂದಲೂ ನೇಮಕಾತಿ ಮಾಡುವುದಕ್ಕೆ ಸಂಬಂಧಿಸಿದಂತೆ ನಮೂನೆಯನ್ನು ಮತ್ತು ಅನುಬಂಧ-2 ರಲ್ಲಿ ನೇರ ನೇಮಕಾತಿ ಅಥವಾ ಮುಂಬಡ್ತಿ ಒಂದೇ ವಿಧಾನದ ಮೂಲಕ ಭರ್ತಿ ಮಾಡುವ ಹುದ್ದೆಗಳಿಗೆ ಸಂಬಂಧಿಸಿದಂತೆ ಜೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸಲು ನಮೂನೆಯನ್ನು ನಿಗದಿಪಡಿಸಲಾಗಿದೆ.

ಅದರಂತೆ ಪ್ರಸ್ತುತ ಸಮಾಜ ಕಲ್ಯಾಣ ಇಲಾಖೆಯ ಪ್ರಥಮ ದರ್ಜೆ ಸಹಾಯಕರು ವೃಂದಕ್ಕೆ ಸಂಬಂಧಿಸಿದಂತೆ ಅನುಬಂಧ-1 ರ (i) ರಲ್ಲಿ ಹುದ್ದೆಗಳ ವಾಸ್ತವಿಕ ಮಾಹಿತಿಯನ್ನು ಮತ್ತು ಹೈದರಾಬಾದ್-ಕರ್ನಾಟಕ ಸ್ಥಳೀಯ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಮತ್ತು ಉಳಿಕೆ ಮೂಲ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಅನುಬಂಧ-1 (ii) ರಲ್ಲಿ ದಿನಾಂಕ:31-12-2023 ಕ್ಕೆ ಅಂತ್ಯಗೊಂಡಂತೆ ದಿನಾಂಕ:01-01-2024 ರಲ್ಲಿದ್ದಂತೆ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಸಮಾಜ ಕಲ್ಯಾಣ ಇಲಾಖೆ ವೆಬ್ ಸೈಟ್ sw.kar.nic.in ನಲ್ಲಿ ಪ್ರಕಟಿಸಿ, ಆಕ್ಷೇಪಣೆಗಳನ್ನು ಸಲ್ಲಿಸಲು ದಿ: 19/02/2024 ರವರೆಗೆ ಕಾಲಾವಕಾಶ ನೀಡಲಾಗಿದೆ.

ಸದರಿ ಜೇಷ್ಠತಾ ಪಟ್ಟಿಯಿಂದ ಬಾಧಿತರಾಗುವ ಎಲ್ಲಾ ನೌಕರರು ಸದರಿ ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿನ ನೌಕರರ ಹೆಸರು, ನೇಮಕಾತಿ ವಿಧಾನ, ಮೀಸಲಾತಿ ವರ್ಗ, ಜನ್ಮ ದಿನಾಂಕ, ಸೇವೆಗೆ ಸೇರಿದ ದಿನಾಂಕ, ಜೇಷ್ಠತೆಗೆ ಪರಿಗಣಿಸಲಾದ ಅರ್ಹತೆ ದಿನಾಂಕ, ಜೇಷ್ಠತೆ ನಿಗದಿಪಡಿಸಿರುವಲ್ಲಿ ವ್ಯತ್ಯಾಸ/ ಲೋಪದೋಷಗಳಿದ್ದಲ್ಲಿ, ಸಂಬಂಧಪಟ್ಟ ನೌಕರರು ಆಕ್ಷೇಪಣೆಯನ್ನು ಲಿಖಿತವಾಗಿ ತಮ್ಮ ಕಛೇರಿ ಮುಖ್ಯಸ್ಥರಿಗೆ ಸಲ್ಲಿಸತಕ್ಕದ್ದು. ಸದರಿ ಆಕ್ಷೇಪಣೆಗಳನ್ನು ದೃಢೀಕೃತ ದಾಖಲೆಗಳೊಂದಿಗೆ ಈ ಕಛೇರಿಗೆ ನೊಂದಣಿ ಅಂಚೆ ಮೂಲಕ ಸಂಬಂಧಪಟ್ಟ ಕಛೇರಿ ಮುಖ್ಯಸ್ಥರು ಸಲ್ಲಿಸತಕ್ಕದ್ದು. ನಿಗದಿತ ಅವಧಿ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ತಿರಸ್ಕರಿಸಲಾಗುವುದು.

ಆಯುಕ್ತರು,
ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.

**ಪ್ರತಿಯನ್ನು ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ:-**

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
2) ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.

3) ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಎಲ್ಲಾ ಜಿಲ್ಲೆಗಳು.
4) ನಿರ್ದೇಶಕರು, ಡಾ:ಬಿ.ಆರ್ ಅಂಬೇಡ್ಕರ್ ಸಂಶೋಧನಾ ಸಂಸ್ಥೆ, ಬೆಂಗಳೂರು.
5) ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಅನುಸೂಚಿತ ಜಾತಿ/ಅನುಸೂಚಿತ ಬುಡಕಟ್ಟುಗಳ ಆಯೋಗ, ಬೆಂಗಳೂರು.
6) ಮುಖ್ಯ ಆಡಳಿತಾಧಿಕಾರಿಗಳು, ಪರೀಕ್ಷಾ ಪೂರ್ವ ತರಬೇತಿ ಕೇಂದ್ರ, ಬೆಂಗಳೂರು.
7) ಕಾರ್ಯದರ್ಶಿಗಳು, ಸಫಾಯಿ ಕರ್ಮಚಾರಿಗಳ ಆಯೋಗ, ಬೆಂಗಳೂರು.
8) ಜಂಟಿ /ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಎಲ್ಲಾ ಜಿಲ್ಲೆಗಳು ರವರಿಗೆ ಇಲಾಖಾ ವೆಬ್‌ಸೈಟ್ ನಲ್ಲಿ ಪ್ರಕಟಿಸಿರುವ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಡೌನ್‌ಲೋಡ್ ಮಾಡಿ ಕಛೇರಿ ಸೂಚನಾ ಫಲಕದಲ್ಲಿ ಪ್ರಕಟಿಸಲು ಹಾಗೂ ಸಂಬಂಧಿಸಿದ ಜಿಲ್ಲೆ/ತಾಲ್ಲೂಕು ಕಛೇರಿಯಿಂದ ನೌಕರರಿಗೆ ಜಾರಿ ಮಾಡಲು ತಿಳಿಸಿದೆ.
9) ಯೋಜನಾ ಸಮನ್ವಯಾಧಿಕಾರಿಗಳು/ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು, ಸಂಬಂಧಪಟ್ಟ ಜಿಲ್ಲೆಗಳು.
10) ಸಹಾಯಕ ನಿರ್ದೇಶಕರು (ಗ್ರೇಡ್-1)/ಗ್ರೇಡ್-2), ಸಮಾಜ ಕಲ್ಯಾಣ ಇಲಾಖೆ, ಎಲ್ಲಾ ತಾಲ್ಲೂಕುಗಳು ರವರಿಗೆ ನೌಕರರು ಸಲ್ಲಿಸುವ ಆಕ್ಷೇಪಣೆಗಳನ್ನು ನಿಯಮಾನುಸಾರ ಪರಿಶೀಲಿಸಿ ಅಂತಿಮ ದಿನಾಂಕದೊಳಗೆ ಕೇಂದ್ರ ಕಛೇರಿಗೆ ಸಲ್ಲಿಸಲು ತಿಳಿಸಿದೆ.
11) ಕಛೇರಿ ಪ್ರತಿ/ಇತರೆ.

ಅನುಬಂಧ – 1

ಭಾಗ–I ಹುದ್ದೆಗಳ ವಾಸ್ತವಿಕ ಮಾಹಿತಿ

1. ಇಲಾಖೆ: ಸಮಾಜ ಕಲ್ಯಾಣ ಇಲಾಖೆ
2. ವೃಂದದ ಹೆಸರು: ಪ್ರಥಮ ದರ್ಜೆ ಸಹಾಯಕರು
3. ವೃಂದದಲ್ಲಿನ ಒಟ್ಟು ಹುದ್ದೆಗಳ ಸಂಖ್ಯೆ( ಶಾಶ್ವತ ಮತ್ತು ತಾತ್ಕಾಲಿಕ ಹುದ್ದೆಗಳೆರಡೂ ಒಳಗೊಂಡಂತೆ): 290 ಹುದ್ದೆ
4. ನೇಮಕಾತಿ ನಿಯಮಗಳ ಅನುಸಾರ ನೇರ ನೇಮಕಾತಿ ಮತ್ತು ಮುಂಬಡ್ತಿಗೆ ನಿಗದಿಪಡಿಸಲಾದ ಪ್ರತಿಶತ: ಶೇ.50 ರಷ್ಟು ನೇರ ನೇಮಕಾತಿ ಮೂಲಕ ಮತ್ತು ಶೇ. 50 ರಷ್ಟು ಮುಂಬಡ್ತಿ ಮೂಲಕ

| ಕ್ರ.ಸಂ | ವೃಂದದ ಹೆಸರು | ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ನೇರ ನೇಮಕಾತಿಗೆ ಮತ್ತು ಮುಂಬಡ್ತಿಗೆ ವರ್ಗೀಕರಿಸಲಾದ ಹುದ್ದೆಗಳ ಸಂಖ್ಯೆ | | ವಾಸ್ತವವಾಗಿ ಭರ್ತಿ ಮಾಡಲಾದ ಹುದ್ದೆಗಳ ಸಂಖ್ಯೆ | | ಹುದ್ದೆಗಳ ಅನುಪಾತ (Quota) ಮತ್ತು ಭರ್ತಿ ಮಾಡಲಾದ ಹುದ್ದೆಗಳ ನಡುವಿನ ಸಂಖ್ಯಾ ವ್ಯತ್ಯಾಸ | | | | ವಾಸ್ತವವಾಗಿ ಲಭ್ಯವಾಗುವ ಖಾಲಿ ಹುದ್ದೆಗಳ ಸಂಖ್ಯೆ | | ಷರಾ |
|---|---|---|---|---|---|---|---|---|---|---|---|---|
| | | | | | | ಹೆಚ್ಚುವರಿ | | ಕೊರತೆ | | | | |
| | | ನೇನೇ | ಮುಂ | ನೇನೇ | ಮುಂ | ನೇನೇ | ಮುಂ | ನೇನೇ | ಮುಂ | ನೇನೇ | ಮುಂ | |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 |
| 1 | ಪ್ರಥಮ ದರ್ಜೆ ಸಹಾಯಕರು | 145 | 145 | 108 | 141 | – | – | 37 | 4 | 37 | 4 | |

02/02/22

ಆಯುಕ್ತರು,
ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.